ಕಡಿತವಿಲ್ಲದೆ ವಿದ್ಯುತ್ ಪೂರೈಕೆ ಬಗ್ಗೆ.

೧೪೯೯. ಶ್ರೀ ಪ್ರಭಾಕರ್ ಎಸ್. ರಾಣಿ (ಕಾರವಾರ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸಿಸುವ ನಾಗರೀಕರು ಬಹು ಪಾಲು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿರುವುದರಿಂದ ಯಾವ ಕಡಿತವು ಇಲ್ಲದೆ ಆ ಭಾಗಗಳಿಗೆ ವಿದ್ಯುತ್ತನ್ನು ಪೂರೈಸುವ ವಿಚಾರ ಸರ್ಕಾರಕ್ಕೆ ಇದೆಯೇ ?

ಆ) ಹಾಗಾದರೆ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ ಇಂಧನ ಮತ್ತು ವಕ್ಫ್ ಸಚಿವರು).—
ಅ) ಮತ್ತು ಆ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾದ ಸೌಲಭ್ಯಗಳ ಬಗ್ಗೆ ಅಧ್ಯಯನ ಕುರಿತು.

೧೫೬೨. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸ್ವಾತಂತ್ರ್ಯದ ನಂತರ ಸಂವಿಧಾನದ ಅನ್ವಯ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ನೀಡಲಾದ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆಯೇ ?

ಆ) ಹಿಂದುಳಿದ ವರ್ಗಗಳ ಆಯೋಗದಂತೆ ಈ ಬಗ್ಗೆ ವಿಶೇಷ ಆಯೋಗವನ್ನು ರಚಿಸಿ ವರದಿ ತರಿಸಿಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸರ್ಕಾರವು ಆಲೋಚಿಸಿದೆಯೇ ?

ಶ್ರೀ ಎಂ. ವೀರಪ್ಪ ಮೋಯ್ಲಿ (ಯೋಜನಾ, ಕಾನೂನು, ಸಂಸದೀಯ ಮತ್ತು ಪ್ರವಾಸೋದ್ಯಮ ಸಚಿವರು (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ).—

ಅ) ಇಲ್ಲಾ, ಆದಾಗ್ಯೂ ಅವರಿಗೆ ದೊರಕುತ್ತಿರುವ ಸವಲತ್ತುಗಳ ಬಗ್ಗೆ ಇಲಾಖಾವತಿಯಿಂದ ಮೌಲ್ಯಮಾಪನ ಹಾಗೂ ಸ್ಯಾಂಪಲ್ ಸರ್ವೆಗಳನ್ನು ಮಾಡಲಾಗಿದೆ.

ಆ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಖಾದಿ ಬೋರ್ಡಿನಿಂದ ನೆರವು ಪಡೆದ ಚಿಕ್ಕ ಕೈಗಾರಿಕಾ ಘಟಕಗಳು

೧೫೫೧. ಶ್ರೀ ಜಿ. ಎಸ್. ಆಚಾರ್, (ಬೈಂದೂರು),—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಖಾದಿ ವಂಡಲಿಯಿಂದ ನೆರವು ಪಡೆದ ಚಿಕ್ಕ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ?

ಆ) ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟಿವೆ ?

ಇ) ಒಟ್ಟು ನೀಡಿದ ಸಾಲದ ಸಹಾಯಧನ ಎಷ್ಟು ?

ಈ) ಅದರಲ್ಲಿ ಒಟ್ಟು ಎಷ್ಟು ವಸೂಲಾಗಿದೆ ?

ಉ) ಈ ಘಟಕಗಳಲ್ಲಿ ನಿಷ್ಕ್ರಿಯವಾಗಿರುವುದೆಷ್ಟು ? ಹಾಲಿ ನಡೆಯುತ್ತಿರುವುದೆಷ್ಟು ? ನಿಷ್ಕ್ರಿಯ ಘಟಕಗಳ ಪುನಶ್ಚೇತನಕ್ಕೆ ಏನಾದರೂ ಯೋಜನೆ ಇದೆಯೇ ?